ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕಂದಾಯ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 12/6/2012

# 4 ದಶಕಗಳ ಕಿರುಕುಳ ಕಾಯಿದೆಗೆ ತಿಲಾಂಜಲಿ

- ಭೂ ಸುಧಾರಣಾ ಕಾಯ್ದೆ 79(ಎ) (ಬಿ)ಗೆ ತಿದ್ದುಪಡಿ
- ದೇಶದಲ್ಲೇ ಕ್ಲಿಷ್ಟಕರ ಕಾಯಿದೆ ಹೊಂದಿದ್ದ ಕರ್ನಾಟಕ

12/6/12


**ಬೆಂಗಳೂರು:** ಕೃಷಿ ಭೂಮಿ ಪರಭಾರೆ ಸಂಬಂಧ ಜಾರಿಯಲ್ಲಿದ್ದ ಕರ್ನಾಟಕ ಭೂ ಸುಧಾರಣಾ ಕಾಯ್ದೆ 79(ಎ)(ಬಿ)ಗೆ ತಿದ್ದುಪಡಿ ತರಲು ರಾಜ್ಯ ಸರ್ಕಾರ ಮುಂದಾಗಿದೆ. 45 ವರ್ಷಗಳಿಂದ ಕಿರುಕುಳ ಎಂದೇ ಅನ್ವರ್ಥನಾಮ ಹೊಂದಿದ್ದ ಈ ಕಾಯ್ದೆಗೆ ಕೊನೆಗೂ ಸರ್ಕಾರ ಎಳ್ಳುನೀರು ಬಿಡಲಿದೆ.ರೈತರು ಅಥವಾ ಬೇರೆಯವರು ಕೃಷಿಭೂಮಿ ಖರೀದಿ ಇಲ್ಲವೇ ಮಾರಾಟಕ್ಕೆ ಸಂಬಂಧಿಸಿದ ಉದ್ದೇಶಕ್ಕೆ ಜಾರಿಯಲ್ಲಿದ್ದ ಈ ಕಾಯ್ದೆಯೇ ಕಂಟಕವಾಗಿತ್ತು. ಜತೆಗೆ ದುರ್ಬಳಕೆಗೂ ಕಾರಣವಾಗಿತ್ತು.

ಇದುವರೆಗೆ ರಾಜ್ಯದಲ್ಲಿ 83,171 ಪ್ರಕರಣಗಳು ಇತ್ಯರ್ಥವಾಗದೆ ಉಳಿದಿರುವುದೇ ಕಾಯ್ದೆಯ ಕ್ಲಿಷ್ಟತೆಗೆ ಸಾಕ್ಷಿಯಾಗಿದೆ. ಜತೆಗೆ ದೇಶದ ಬೇರೆಲ್ಲೂ ಅಸ್ತಿತ್ವದಲ್ಲಿರದ 79(ಎಬಿ)ರಾಜ್ಯದಲ್ಲಿ ಮಾತ್ರ ಜಾರಿಯಲ್ಲಿತ್ತು.ಇದೀಗ ಸರ್ಕಾರ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಜಾರಿಯಲ್ಲಿದ್ದ ಕೃಷಿಯೇತರ ಆದಾಯ(25ಲಕ್ಷ ರೂ) ಹಾಗೂ ಜಮೀನು(108 ಎಕರೆ) ಮಿತಿಯನ್ನು ತೆಗೆದುಹಾಕಲಿದೆ. ಅಲ್ಲದೆ ಭೂಮಿ ಪರಭಾರೆಗೆ ಸ್ವತಂತ್ರ ಅವಕಾಶ ಕಲ್ಪಿಸಲಿದೆ. ಕೃಷಿ ಭೂಮಿ ಪರಭಾರೆ ಹೆಚ್ಚುತ್ತಿದ್ದು ಕಂದಾಯ ಇಲಾಖೆಯಲ್ಲಿ ವ್ಯಾಪಕ ಭ್ರಷ್ಟಾಚಾರಕ್ಕೆ ದಾರಿ ಮಾಡಿದೆ ಎನ್ನುವ ಆರೋಪಗಳು ವ್ಯಾಪಕವಾಗಿ ಕೇಳಿ ಬಂದಿದ್ದವು.

**ಏನಿದು 79(ಎ)(ಬಿ)**

ಈ ಕಲಂ ಪ್ರಕಾರ ಯಾರಾದರೂ ಕೃಷಿ ಭೂಮಿ ಖರೀದಿಸಬೇಕಾದರೆ ಅವರು ಅಥವಾ ಅವರ ಮನೆಯಲ್ಲೊಬ್ಬರು 1973–74 ಇಲ್ಲವೇ ಅದಕ್ಕೂ ಹಿಂದೆ ಕೃಷಿಕರಾಗಿರಬೇಕು. ಆದಾಯ ತೆರಿಗೆ ಪಾವತಿಸಿರಬಾರದು, ಕೃಷಿಯೇತರ ಮೂಲಗಳಿಂದ ಇಪ್ಪತ್ತೈದು ಲಕ್ಷ ರೂ.ಗೆ ಮೀರಿ ಆದಾಯ ಇರಬಾರದು.

ಜಮೀನು ಖರೀದಿಸುವವರು ನಾವು ಮೂಲತಃ ಕೃಷಿಕರು, ಕೃಷಿ ಹೊರತಾದ ಮೂಲಗಳಿಂದ ಯಾವುದೇ ಆದಾಯ ಇಲ್ಲ ಎಂದು ದಾಖಲೆ ಸಲ್ಲಿಸಬೇಕಿತ್ತು, ಖರೀದಿಸುವ ಜಮೀನಿಗೆ ಯಾವ ಮೂಲದಿಂದ ಹಣಕಾಸು ಲಭ್ಯವಿದೆ ಎಂಬುದನ್ನು ದಾಖಲೆ ಸಹಿತ ಉಪ ವಿಭಾಗಾಕಾರಿಗಳ ವಿಚಾರಣೆ ಸಮಯದಲ್ಲಿ ಸಾಬೀತುಪಡಿಸಬೇಕು. ಒಂದು ವೇಳೆ ವಿಚಾರಣೆ ಸಮಯದಲ್ಲಿ ಪೂರಕ ದಾಖಲೆ ಹಾಜರುಪಡಿಸದಿದ್ದಲ್ಲಿ ಅಂತಹ ಜಮೀನುಗಳನ್ನು ಕರ್ನಾಟಕ ಭೂ ಸುಧಾರಣಾ ಕಾಯ್ದೆ ಉಲ್ಲಂಘನೆ ಆರೋಪದ ಮೇಲೆ ಮುಟ್ಟುಗೋಲು ಹಾಕಿಕೊಂಡು ಸಾರ್ವಜನಿಕ ಉದ್ದೇಶಕ್ಕೆ ವಿತರಿಸುವ ಅಧಿಕಾರ ಉಪವಿಭಾಗಾಧಿಕಾರಿಗಳಿಗಿತ್ತು. ಕಲಂ 79(ಸಿ) ಕುರಿತು ತಹಸೀಲ್ದಾರರು ವಿಚಾರಣೆ ನಡೆಸಿದರೆ, 79 (ಎ)(ಬಿ) ಕುರಿತು ಉಪವಿಭಾಗಾಕಾರಿ ವಿಚಾರಣೆ ನಡೆಸುತ್ತಿದ್ದರು. ಆದರೆ ಖಾಸಗಿ ಲ್ಯಾಂಡ್ ಮಾಫಿಯಾಗಳ ಹಾವಳಿಯಿಂದ ನಿಜವಾದ ರೈತರು ಸಹ 79(ಎ)(ಬಿ) ಕಲಂನಡಿ ಕ್ಲಿಯರೆನ್ಸ್ ಪಡೆಯಲು ಹರಸಾಹಸ ಪಡಬೇಕಾದ ಸನ್ನಿವೇಶ ನಿರ್ಮಾಣವಾಗಿತ್ತು.



> ” ಕಾಯ್ದೆಯಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಿತ್ತು. ರೈತರಿಗೆ ಆಗುತ್ತಿದ್ದ ಕಿರುಕುಳ ತಪ್ಪಿಸಲೆಂದೇ ತಿದ್ದುಪಡಿ ತರುತ್ತಿದ್ದೇವೆ. ಅಸೆಂಬ್ಲಿಯಲ್ಲಿ ಬಿಲ್ ಮಂಡಿಸಿ ಚರ್ಚಿಸಿಯೇ ಅಂತಿಮಗೊಳಿಸುತ್ತೇವೆ.
>
> | ಆರ್.ಅಶೋಕ್
> ಕಂದಾಯ ಸಚಿವ

## ಅಭಿನಂದನೆ

ಭೂ ಸುಧಾರಣೆ ಶಾಸನದ 79ಎ ಹಾಗೂ 79ಬಿ ಕಲಂಗಳನ್ನ ರದ್ದುಪಡಿಸಲು ಸಂಪುಟ ಕೈಗೊಂಡಿರುವ ತೀರ್ಮಾನ ಸ್ವಾಗತಾರ್ಹ ಇಂತಹ ನಿರ್ಧಾರದಿಂದ ಭೂಒಡೆತನ ಹೊಂದಿರುವ ರೈತರ ಕಷ್ಟಗಳು ದೂರವಾಗುತ್ತವೆ ಈ ನಿರ್ಧಾರಕ್ಕಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಕಂದಾಯ ಸಚಿವ ಆರ್. ಅಶೋಕ್ ಮತ್ತು ಸಂಪುಟ ಸದಸ್ಯರಿಗೆ ಅಭಿನಂದನೆ

**ಶಾಸಕರಾದ ಯುಬಿ ವೆಂಕಟೇಶ್, ಕೆಸಿ ಕೊಂಡಯ್ಯ**